Sri KADIDAL MANJAPPA.—Even otherwise, we have asked the local officers to take necessary action.

Grant of Land in Thalagavadi, Malavalli Taluk.

Q.—278. Sri M. CHIKKALINGIAH (Malavalli—Scheduled Castes).—

Will the Government be pleased to state :—

(*a*) the number of applications received for grant of land in Survey No. 142 of Thalagavadi Village, Malavalli Taluk, from (i) Depressed Class, (ii) Military, (iii) other applicants ;

(*b*) the extent available for cultivation after reserving ; and

(*c*) the stage at which the Darkhast records stand at present ?

A.–Sri KADIDAL MANJAPPA (Minister for Revenue and Public Works).—

(*a*)	(i) Depressed class ...	20
	(ii) Military ...	10
	(iii) Other applicants...	42
	Total ...	72

(*b*) As per darkhast records, an extent of 59 acres and 25 guntas (excluding the area under occupation of the colonists) is available.

(*c*) The record is under correspondence.

ಶ್ರೀ ಎಂ. ಚಿಕ್ಕಲಿಂಗಯ್ಯ.—ಜಮೀನಿಲ್ಲದಿರುವ ನಿಮ್ನವರ್ಗದವರಿಗೆ ಜಾಗ್ರತೆ ಜಮೀನು ವಿಲೇವಾರಿ ಮಾಡಲು ಪ್ರಯತ್ನ ಮಾಡುತ್ತಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಬಹುದು.

Widening Malavalli Tank Bund.

Q.—279. Sri M. CHIKKALINGIAH (Malavalli—Scheduled Castes).—

Will the Government be pleased to state :—

(*a*) whether it is not a fact that the Government promised the widening of the bund of Malavalli Tank on which there is heavy traffic ; and

(*b*) if so, the estimated cost for the same and action taken so far ?

A.—Sri KADIDAL MANJAPPA (Minister for Revenue and Public Works).—

(*a*) Government had promised to consider the question.

(*b*) An estimate was prepared in 1950 but was deferred. The matter is again under consideration.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮಳವಳ್ಳಿ ಕೆರೆ ಏರಿ ಬಹಳ narrow ಆಗಿದೆ, ಅದನ್ನು ಅಗಲಮಾಡಬೇಕೆಂದು ಮನವಿ ಮಾಡಿರುವುದು ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ. —ಇದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ತಯಾರಿಸಿದ ಅಂದಾಜನ್ನು ಮುಂದಕ್ಕೆ ತಳ್ಳಿಹಾಕಲು ಕಾರಣವೇನು?

Sri KADIDAL MANJAPPA.—This question is linked up with the question of restoration of tank. There is the demand for restoring that tank.

ಶ್ರೀ ಎಂ. ಚಿಕ್ಕಲಿಂಗಯ್ಯ.—ಏರಿಯನ್ನು ಅಗಲ ಪಡಿಸದಿರುವುದರಿಂದ ಜನರಿಗೆ ತೊಂದರೆಯಾಗಿದೆಯೆಂಬುದು ಗೊತ್ತಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಸ್ವಲ್ಪ narrow ಆಗಿದೆ ; ಅಷ್ಟು ತೊಂದರೆಯಾಗಿಲ್ಲ ; ನಾನೂ ನೋಡಿದ್ದೇನೆ. ಅಂಥ ರಸ್ತೆಗಳು ಬೇಕಾದಷ್ಟಿವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಏರಿ ದೊಡ್ಡದು ಮಾಡಕೂಡದೆಂದು ರೆಪ್ರೆಸೆಂಟೇಷನ್ ಏನಾದರೂ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.--ಈಗಲಾದರೂ ಇದನ್ನು ಅದಷ್ಟು ಜಾಗ್ರತೆ ಅಗಲ ಪಡಿಸಲು ಸಾಧ್ಯವೆ ?

Crops affected in Honnali Taluk.

Q.—111. Sri H. S. RUDRAPPA (Honnali).—

Will the Government be pleased to state :—

(*a*) whether they are aware that the crops in Honnali Taluk have been badly affected this year by excess of rain and multifarious diseases ;

(*b*) whether any representations have been made to them and the concerned authorities in this connection ?

A.—Dr. R. NAGAN GOWDA (Minister for Agriculture).—

(*a*) Only jola crop was affected to some extent in Honnali Taluk due to heavy rains and infestation of Top Borer (Chilo zenellu) during 1953 Monsoon season, while crops like paddy, ragi, navane, groundnut, chillies were exceptionally good and gave bumper yields in the Taluk.

(*b*) Yes.

ಶ್ರೀ ಎಚ್. ಎಸ್. ರುದ್ರಪ್ಪ.—ಜೋಳ ಎಷ್ಟಾಣೆ ಬೆಳೆಯಾಗಿದೆ ? ಬಾಕಿ ಪದಾರ್ಥಗಳಲ್ಲಿ ಎಷ್ಟಾಣೆ ಬೆಳೆಯಾಗಿದೆ ?

ಡಾ॥ ಆರ್. ನಾಗನ ಗೌಡ.—ಆಣೆ ಲೆಕ್ಕ ಇನ್ನೂ ಬಂದಿಲ್ಲ; ಚೆನ್ನಾಗಿ ಬೆಳೆಯಾಗಿದೆಯೆಂದು ವರದಿ ಬಂದಿದೆ.

9 A. M.

ಶ್ರೀ ಎಚ್. ಎಸ್. ರುದ್ರಪ್ಪ.—ಆ ರೀತಿ ತಮಗೆ ತಿಳಿದುಬಂದಮೇಲೆ ಅದು ನರಿಯೆ ಅಥವಾ ನರಿಯಲ್ಲವೇ ಎಂಬ ಬಗ್ಗೆ ವಿಚಾರಣೆ ಮಾಡಿದ್ದೀರಾ, ಅಥವಾ ಆ ಅಂಕಿ ಅಂಶಗಳನ್ನು ಪಹಣಿ ಲೆಕ್ಕದ ಆಧಾರದಮೇಲೆ ಕೊಟ್ಟಿದ್ದಾರೆಯೇ ?

ಡಾ॥ ಆರ್. ನಾಗನ ಗೌಡ.—ನಮಗೆ ಈ ವರದಿ ಬಂದಿರುವುದು ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನಿಂದ.

ಶ್ರೀ ಎಚ್. ಎಸ್. ರುದ್ರಪ್ಪ.—ಅಲ್ಲಿಯ ರೆವೆನ್ಯೂ ಅಧಿಕಾರಿಗಳಿಂದ ತಮಗೆ ನೇರವಾಗಿ ವರದಿ ಬಂದಿಲ್ಲವೇ ?

ಡಾ॥ ಆರ್. ನಾಗನ ಗೌಡ.—ಇಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗಾದರೆ ತಮಗೆ ಈ ವರದಿಯನ್ನು ಅಲ್ಲಿಯ seasonal condition ಆಧಾರದಮೇಲೆ ಕಳುಹಿಸಿದ್ದಾರೆಯೇ ?

ಡಾ॥ ಆರ್. ನಾಗನ ಗೌಡ.—ಯಾವ ಆಧಾರದ ಮೇಲೆ ಕಳುಹಿಸಿದ್ದಾರೆಂಬುದು ಗೊತ್ತಿಲ್ಲ. ಈ ವರದಿ ನಮಗೆ ಬಂದಿರುವುದು ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನಿಂದ. ಈ ವಿಷಯ ರೆವೆನ್ಯೂ ಅಧಿಕಾರಿಗಳಿಗಿಂತ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನವರಿಗೇ ಚೆನ್ನಾಗಿ ಗೊತ್ತಿರುತ್ತೆ.

ಶ್ರೀ ಎಚ್. ಎಸ್. ರುದ್ರಪ್ಪ.—ಈ ಬಗ್ಗೆ representation ಏನಾದರೂ ಬಂದಿದ್ದರೆ ಅವುಗಳ ಆಧಾರದ ಮೇಲೆ ತನಿಖೆ ನಡೆಸಲಾಗುತ್ತದೆಯೇ ?

ಡಾ॥ ಆರ್. ನಾಗನ ಗೌಡ.—ಅವುಗಳ ಆಧಾರದ ಮೇಲೆಯೇ ಈಗ ತನಿಖೆಮಾಡಿರುವುದು.

ಶ್ರೀ ಎಚ್. ಎಸ್. ರುದ್ರಪ್ಪ.— ತನಿಖೆಮಾಡಿ ಸಂಬಂಧಪಟ್ಟ ಅಧಿಕಾರಿಗಳು ತಮಗೆ ವರದಿ ಕಳುಹಿಸಿದ್ದಾರೆಯೇ ?

ಡಾ॥ ಆರ್. ನಾಗನ ಗೌಡ.—ಹೌದು.

ಶ್ರೀ ಎಚ್. ಎಸ್. ರುದ್ರಪ್ಪ.—ಒಂದುವೇಳೆ ಅವರು ತಮಗೆ ತಿಳಿಸಿರುವ ವಿಚಾರ ತಪ್ಪೆಂದು ಕಂಡುಬಂದರೆ ಸಂಬಂಧಪಟ್ಟವರಮೇಲೆ ಕ್ರಮಕೈಗೊಳ್ಳುತ್ತೀರಾ ?

ಡಾ॥ ಆರ್. ನಾಗನ ಗೌಡ.—ಒಂದೊಂದು ಸಾರಿ ಜಡ್ಜ್‌ಮೆಂಟ್‌ಗಳಲ್ಲಿಯೂ ಪರಿಪಾಟು ಆಗಿರುವ ಸಂದರ್ಭಗಳುಂಟು. ಆ ರೀತಿ ಆಗಿದ್ದರೆ ತಕ್ಕ ಪರಿಹಾರ ದೊರಕುತ್ತೆ.

ಶ್ರೀ ಎಚ್. ಎಸ್. ರುದ್ರಪ್ಪ.—ಪರಿಹಾರದ ಪ್ರಶ್ನೆ ನಾನು ಈಗ ಪ್ರಸ್ತಾಪಿಸುತ್ತಿಲ್ಲ. ಆದರೂ ಈ ಪರಿಹಾರವನ್ನು ಅವರಿಗೆ ಸರ್ಕಾರದವರು ಯಾವ ರೀತಿ ಒದಗಿಸುತ್ತೀರಿ ?

ಡಾ॥ ಆರ್. ನಾಗನ ಗೌಡ.—ಲ್ಯಾಂಡ್ ರೆವೆನ್ಯೂ ರಿಮಿಷ್ಷ ಕೊಡುವುದರ ಮೂಲಕ ಅಥವಾ ಕಟಾವಿಗೆ ಬರತಕ್ಕ ಕಾಲದಲ್ಲಿ ರಿಯಾಯಿತಿ ತೋರಿಸುವುದರ ಮೂಲಕ ಪರಿಹಾರ ಕೊಡಲಾಗುತ್ತೆ.

ಶ್ರೀ ಎಚ್. ಎಸ್. ರುದ್ರಪ್ಪ.—ಆ ರೀತಿ ಪರಿಹಾರ ದೊರಕಿಸಿಕೊಳ್ಳುವುದಕ್ಕೆ ಏನು ಮಾಡಬೇಕು ?

ಡಾ॥ ಆರ್. ನಾಗನ ಗೌಡ.—ಸಂಬಂಧಪಟ್ಟವರು ಡೆಪ್ಯುಟಿ ಕಮಿಷನರಿಗೆ ವರದಿ ಮಾಡಬೇಕು.

ಶ್ರೀ ಎಚ್. ಎಸ್. ರುದ್ರಪ್ಪ.—ಆ ಅಭಿಪ್ರಾಯವನ್ನು ಸರ್ಕಾರಕ್ಕೆ ಕೊಡುವ ಜವಾಬ್ದಾರಿ ಯಾರದು ?

ಅಧ್ಯಕ್ಷರು.—ಯಾವ ಅಭಿಪ್ರಾಯ ?

ಶ್ರೀ ಎಚ್. ಎಸ್. ರುದ್ರಪ್ಪ.—ಬೆಳೆ ಸರಿಯಾಗಿ ಆಗಿಲ್ಲವೆಂದೂ, ಅದಕ್ಕಾಗಿ ಪರಿಹಾರ ಕೊಡಬೇಕೆಂದೂ ಸರ್ಕಾರಕ್ಕೆ ವರದಿ ಮಾಡುವ ಜವಾಬ್ದಾರಿ ಯಾರದು ?

ಡಾ॥ ಆರ್ ನಾಗನ ಗೌಡ.—ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನವರು ತಿಳಿಸಬೇಕು. ಆದರೆ ರೆವೆನ್ಯೂ ಅಧಿಕಾರಿಗಳಿಂದ ಈ ಬಗ್ಗೆ ರೆವೆನ್ಯೂ ಮಂತ್ರಿಗಳಿಗೆ ತಿಳಿಸುತ್ತಾರೋ ಏನೋ ನನಗೆ ತಿಳಿಯದು; ಅದನ್ನು ವಿಚಾರಿಸಬೇಕು.

Mr. SPEAKER.—Agricultural crops concerns the Minister for Agriculture. This question relates to him.

ಶ್ರೀ ಎಚ್. ಎಸ್. ರುದ್ರಪ್ಪ.—ಈ ವಿಚಾರದಲ್ಲಿ ಈಗಲಾದರೂ ತನಿಖೆ ನಡೆಸುತ್ತೀರಾ ?

ಅಧ್ಯಕ್ಷರು.—ಯಾವ ವಿಚಾರದಲ್ಲಿ ?

ಶ್ರೀ ಎಚ್. ಎಸ್. ರುದ್ರಪ್ಪ.—ಬೆಳೆ ಸರಿಯಾಗಿ ಆಗಿಲ್ಲವೆಂದು ಹೇಳಿರುವುದು ಸರಿಯಾಗಿದೆಯೇ ಅಥವಾ ಇಲ್ಲವೇ ಎಂಬ ಅಭಿಪ್ರಾಯವನ್ನು ಸರ್ಕಾರಕ್ಕೆ ವರದಿ ಮಾಡಿರುವ ವಿಚಾರ.

Mr. SPEAKER—It has affected some parts to some extent. That is the answer.

ಶ್ರೀ ಎಚ್. ಎಸ್. ರುದ್ರಪ್ಪ.—ಎಷ್ಟು ಬೆಳೆ ಆಗಿದೆಯೆಂಬುದನ್ನು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನವರು ತಿಳಿಸಿದ್ದರೆ ಅದನ್ನು ತನಿಖೆಮಾಡಿ ತಿಳಿದುಕೊಳ್ಳುತ್ತೀರಾ ?

ಡಾ॥ ಆರ್. ನಾಗನ ಗೌಡ.—ಅದನ್ನು ರೆವೆನ್ಯೂ ಮಂತ್ರಿಗಳಿಗೆ ತಿಳಿಸುತ್ತೇನೆ.

ಶ್ರೀ ಎಚ್. ಎಸ್. ರುದ್ರಪ್ಪ.—ಕಾಂಗ್ರೆಸ್ ಸಂಸ್ಥೆಯವರು ಈ ಬಗ್ಗೆ ಒಂದು resolution ಮಾಡಿ ಅಲ್ಲಿ ಬೆಳೆ ಆಗಿಲ್ಲ, ತೊಂದರೆಯಾಗಿದೆ ಎಂದು ಸರ್ಕಾರಕ್ಕೆ ತಿಳಿಸಿರುವುದು ಗೊತ್ತಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೊನ್ನಾಳಿ ತಾಲ್ಲೂಕು ವಿಚಾರವೇ ತಾವು ಹೇಳುತ್ತಿರುವುದು ?

ಶ್ರೀ ಎಚ್. ಎಸ್. ರುದ್ರಪ್ಪ.—ಹೌದು.

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ವರದಿ ಸರ್ಕಾರಕ್ಕೆ ಬಂದಿದೆ ಆದರೆ ರೆಮಿಷ್ಷ ಕೊಡುವಷ್ಟು ಕಡಮೆ ಬೆಳೆ ಆಗಿಲ್ಲವೆಂದು ತಿಳಿದುಬಂದಿದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಯಾರ ಮೂಲಕ ತಮಗೆ ಈ ರೀತಿ ತಿಳಿದುಬಂದಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ಅಧಿಕಾರಿಗಳ ಮೂಲಕ.

ಶ್ರೀ ಎಚ್. ಎಸ್. ರುದ್ರಪ್ಪ.—ಈ ಬಗ್ಗೆ ನಿಜವಾದ ಸ್ಥಿತಿ ಯಾವ ರೀತಿ ಇದೆಯೆಂಬುದನ್ನು ತಿಳಿದುಕೊಂಡು ಸರ್ಕಾರಕ್ಕೆ ನಿಷ್ಪಕ್ಷಪಾತವಾಗಿ ವರದಿಮಾಡಲು ಈ ಸಭೆಯ ಮಾನ್ಯ ಸದಸ್ಯರುಗಳ ಪೈಕಿ ಯಾರನ್ನಾದರೂ ಮಂಡ್ಯದವರನ್ನಾದರೂ ಸರವಾಗಿಲ್ಲ ಕಳುಹಿಸುವಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ರೆಮಿಷ್ಷ ಕೊಡುವ ವಿಚಾರದಲ್ಲಿ ತನಿಖೆ ನಡೆಸಿ ವರದಿ ಮಾಡಲು ಖಾಸಗೀ ಸದಸ್ಯರನ್ನು ಸರ್ಕಾರದವರು ಕಳುಹಿಸಿಕೊಡುವ ಪದ್ಧತಿ ಇದುವರೆಗೆ ಜಾರಿಯಲ್ಲಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ತಾವು ಇದುವರೆಗೆ ಪಹಣೀ ಲೆಕ್ಕದ ಆಧಾರದ ಮೇಲೇ ಇವನ್ನು ನಿರ್ಧರಿಸಿ ಕೊಡುಬಂದದ್ದು; ಆದರಿಂದ ಜನಸಾಮಾನ್ಯರಿಗೆ ತೊಂದರೆಯಾಗಿದ್ದರೆ ಅದಕ್ಕೆ ಯಾರು ಜವಾಬ್ದಾರರು ?

ಶ್ರೀ ಕಡಿದಾಳ್ ಮಂಜಪ್ಪ.—ಪಹಣೀ ಲೆಕ್ಕದ ಆಧಾರ ಒಂದೇ ಅಲ್ಲ; distress condition ವಿಚಾರವನ್ನು ಗಣನೆಗೆ ತೆಗೆದುಕೊಂಡು ಅನಂತರ ವರದಿಮಾಡಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗಾದರೆ ಈಗ ಹೊನ್ನಾಳಿ ತಾಲ್ಲೂಕಿನಲ್ಲಿ ಆಹಾರ ಸಾವಗ್ರಿಗಳನ್ನೊದಗಿಸಲು ಸರ್ಕಾರದ ಡಿಪೋ ಪ್ರಾರಂಭಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.— ಎಲ್ಲಾಕಡೆಯೂ ಪ್ರಾರಂಭಿಸಿರುವಂತೆ ಅಲ್ಲಿಯೂ ಪ್ರಾರಂಭಿಸಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪ.—ಬಹಳ ಬೆಳೆ ಆಗಿದ್ದರೆ ಈ ಡಿಪೋ ಆವಶ್ಯಕತೆ ಏನಿತ್ತು ?

ಶ್ರೀ ಕಡಿದಾಳ್ ಮಂಜಪ್ಪ.—ಡಿಪೋಗಳನ್ನು ಇಟ್ಟಿರುವ ವಿಚಾರವನ್ನು ತಾವು ಆ ದೃಷ್ಟಿಯಿಂದ ನೋಡಬಾರದು. ಜನರ ಅನುಕೂಲಕ್ಕಾಗಿ ಡಿಪೋಗಳನ್ನು ತೆರೆದ್ದೇವೆ.

ಶ್ರೀ ಎಚ್. ಎಸ್. ರುದ್ರಪ್ಪ. ಈ ಡಿಪೋಗಳು ಇದ್ದಮಾತ್ರಕ್ಕೆ ಹೆಚ್ಚು ಧಾನ್ಯ ಖರ್ಚಾಗುತ್ತದೆಂಬುದು ತಮ್ಮ ಅಭಿಪ್ರಾಯವೇ ?

ಶ್ರೀ ಎಚ್. ಸಿದ್ದವೀರಪ್ಪ.—ಡಿಪೋಗಳನ್ನು ತೆಗೆದಿರುವುದು ಮುಖ್ಯವಾಗಿ ಧಾನ್ಯಗಳ ಬೆಲೆಯನ್ನು stabilise ಮಾಡಿಕೊಳ್ಳುವುದಕ್ಕಾಗಿ.

ಶ್ರೀ ಎಚ್. ಎಸ್. ರುದ್ರಪ್ಪ.— ಈ ಡಿಪೋಗಳ ಧಾರಣೆಗಿಂತಲೂ ಹೊರಗೆ ಧಾನ್ಯಗಳ ಬೆಲೆಯು ಇಳಿವರಿಗೆ ಬಂದು ಡಿಪೋಗಳ ಮೂಲಕ ಧಾನ್ಯಗಳು ಸರಬರಾಯಿ ಆಗುತ್ತಿರುವುದರಿಂದ ಜನರಿಗೆ ತೊಂದರೆಯಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ತೊಂದರೆಯಾಗಿರುವುದು ಕಂಡುಬಂದಿಲ್ಲ. ಮಾನ್ಯ ಸದಸ್ಯರು ತಿಳಿಸಿದ ಅಂಶವನ್ನು ವಿಚಾರಿಸುತ್ತೇನೆ.

Scheme to start a Regulated Market in Bangalore.

Q.—355. Sri A. V. NARASIMHA REDDY (Bangalore South).—

Will the Government be pleased to state :—

(*a*) whether there are represenitatons to bring the market of Bangalore under the scheme of Regulated Markets ;

(*b*) the steps they have taken to implement this scheme ?

A.—Dr. R. NAGAN GOWDA (Minister for Agriculture).—

(*a*) Yes.

(*b*) A scheme for the starting of a Regulated Market at Bangalore for several important agricultural commodities such as, Potatoes, Onions, Tamarind, Groundnuts, Chillies, Jaggery, etc., is under consideration of Government.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರಿನಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಒಂದನ್ನು ಸ್ಥಾಪಿಸಲು ಸರ್ಕಾರದವರು ಕೈಗೊಳ್ಳಬೇಕೆಂದಿರುವ ಕಾರ್ಯಕ್ರಮವೇನು ?

ಡಾ॥ ಆರ್. ನಾಗನ ಗೌಡ.—ಈ ಬಗ್ಗೆ ಸ್ಥಳೀಯ ಸಂಸ್ಥೆಯ ಅಭಿಪ್ರಾಯವೇನೆಂದು ಸರ್ಕಾರದವರು ಕೇಳಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಒಂದು ವೇಳೆ ಸ್ಥಳೀಯ ಸಂಸ್ಥೆಯವರು ಇದು ಬೇಕಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಆಗ ಸರ್ಕಾರದವರು ಏನು ಮಾಡುತ್ತಾರೆ ?

ಡಾ॥ ಆರ್. ನಾಗನ ಗೌಡ.—ಆ ರೀತಿ ಅಭಿಪ್ರಾಯ ಸ್ಥಳೀಯ ಸಂಸ್ಥೆಗಳಿಂದ ಬರುತ್ತೆ ಎಂದು ಸರ್ಕಾರ ನಿರೀಕ್ಷಿಸಿಲ್ಲ. ಈ ಏರ್ಪಾಡಿನಿಂದ ಎಲ್ಲರಿಗೂ ಫಲಕಾರಿಯಾಗುತ್ತದೆ.

ಶ್ರೀ ಕೆ. ವಿ. ಬೈರೇಗೌಡ.—ಇದರಿಂದ ವರ್ತಕರಿಗೆ ಲಾಭದಾಯಕ ದೃಷ್ಟಿಯಿಂದ ತೊಂದರೆ ಆಗುತ್ತದೆಂಬುದನ್ನು ಸರ್ಕಾರದವರು ಭಾವಿಸಿಲ್ಲವೇ ?

ಡಾ॥ ಆರ್. ನಾಗನ ಗೌಡ.—ಭಾವಿಸಿಲ್ಲ ; ಇದು ಸಾರ್ವಜನಿಕ ಹಿತದೃಷ್ಟಿಯಿಂದ ಒಳ್ಳೆಯದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇದೊಂದು ವೇಳೆ ಲಾಭದಾಯಕವಲ್ಲವೆಂಬ ದೃಷ್ಟಿಯಿಂದ ವರ್ತಕರೆಲ್ಲ ಇದು ಬೇಡವೆಂದು ನಿರ್ಧರಿಸಿದರೆ ಈ ಬಗ್ಗೆ ಈಗ ಜಾರಿಯಲ್ಲಿರುವ ಕಾನೂನು ತಿದ್ದುಪಡಿಮಾಡಿಯಾದರೂ ಈ ರೆಗ್ಯುಲೇಟೆಡ್ ಮಾರ್ಕೆಟ್ ಏರ್ಪಡಿಸುತ್ತೀರಾ ?

ಡಾ॥ ಆರ್. ನಾಗನ ಗೌಡ.—ಕಾರ್ಪೋರೇಷನ್ನಿನಲ್ಲಿ ವರ್ತಕರ ಪರ ಇರುವವರು ಮಾತ್ರವೇ ಇಲ್ಲ. ಜನ ಹಿತಕಾಂಕ್ಷಿಗಳೂ ಇದ್ದಾರೆ. ಆದ್ದರಿಂದ ನಾವು ಆ ರೀತಿ ಭಯಪಡಬೇಕಾಗಿಲ್ಲ.

Foreign Trained Officers in the Department of Animal Husbandry.

Q.—356. Sri A. V. NARASIMHA REDDY (Bangalore South).—

Will the Government be pleased to state :—

(*a*) how many candidates trained in foreign countries are available in the Department of Animal Husbandry and how their services are utilised ;

(*b*) when the post of Animal Husbandry Research Officer was created and filled up and what is the nature of the post ;

(*c*) whether there is a post of Veterinary Research Officer at the Serum Institute, Mysore ; if so, how it is disposed of ?